# ಬಯಸದೇ ಬಂದ ಭಾಗ್ಯ

**ಮೋಕ್ಷಿತಾ ಪೈ**
**ಝೀ ಕನ್ನಡದ ‘ಪಾರು’ ನಾಯಕಿ**

◆ **‘ಪಾರು’ ಧಾರಾವಾಹಿಯನ್ನು ಎಳೆಯುತ್ತಿದ್ದಾರೆ ಎಂದೆನಿಸುತ್ತಿದೆ. ನಿಮಗೆ ಏನೆನಿಸುತ್ತದೆ?**

ಕಥೆಗೆ ಏನು ಅಗತ್ಯ ಇದೆ ಎಂದು ಅನ್ನಿಸಿದೆಯೋ ಅದಕ್ಕೆ ಪೂರಕವಾಗಿಯೇ ಸನ್ನಿವೇಶಗಳನ್ನು ಸೃಷ್ಟಿಸುತ್ತಿದ್ದಾರೆ. ಕಥೆಯನ್ನು ಕುತೂಹಲದಿಂದ ಮುಂದುವರಿಸುತ್ತಿದ್ದಾರೆ. ಇದು ವೀಕ್ಷಕರು ಕೂಡ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ. ಕಥೆಯನ್ನು ಎಲ್ಲೋ ಒಂದೇ ಕಡೆ ನಿಲ್ಲಿಸಿ ಡ್ರ್ಯಾಗ್ ಮಾಡುತ್ತಿಲ್ಲ. ಸಂದರ್ಭಕ್ಕೆ ಅನುಸಾರ ಹೊಸ ತಿರುವು ಪಡೆಯುತ್ತಿದೆ. ಈಗ ಆದಿ ಮನೆಯಿಂದ ದಂಪತಿ ಹೊರ ಬಂದಿದ್ದಾರೆ. ಯಾಕೆ ಹೊರಬಂದರು ಎನ್ನುವುದು ಮತ್ತೊಂದು ಕುತೂಹಲ ಸಂಗತಿ. ಅವರು ತಮ್ಮ ತಮ್ಮನಿಗೆ ಯಾರು ಕಷ್ಟ ಕೊಡುತ್ತಿದ್ದಾರೆ ಎನ್ನುವುದನ್ನು ಶೋಧಿಸುವ ಜಾಡಿನಲ್ಲಿದ್ದಾರೆ. ಪಾರು ಗರ್ಭಿಣಿಯಾಗಿದ್ದಾಳೆ. ಮನೆಯಿಂದ ಹೊರ ಬಂದಿರುವ ಅವಳಿಗೆ ಯಾರ ಸಹಕಾರವೂ ಇಲ್ಲ. ಹೇಗೆ ತನ್ನ ಬದುಕನ್ನು ನಿಭಾಯಿಸುತ್ತಾಳೆ ಎನ್ನುವುದು ಮುಖ್ಯ. ಅಖಿಲಾಂಡೇಶ್ವರಿಗೆ ವಿಷಯ ಗೊತ್ತಾಗಿ ಅವರು ಎಷ್ಟರಮಟ್ಟಿಗೆ ಸಹಾಯ ಮಾಡುತ್ತಾರೆ ಎನ್ನುವುದು ಅಷ್ಟೇ ಮುಖ್ಯ. ನನಗಂತೂ ಇದು ಬೋರಿಂಗ್ ಅಂತ ಅನ್ನಿಸಿಲ್ಲ.

◆ **ನಟನೆಯನ್ನು ಆರಂಭಿಸಿದ್ದು ಹೇಗೆ?**

ಕಲಾವಿದೆ ಆಗಬೇಕು, ನಟಿಸಬೇಕು ಎನ್ನುವ ಆಸೆ ಯಾವತ್ತೂ ಇರಲಿಲ್ಲ. ಇದು ಇದ್ದಕ್ಕಿದ್ದಂತೆ ಬಂದ ಅವಕಾಶ. ಅಪ್ರಯತ್ನಪೂರ್ವಕವಾಗಿ ಬಂದಿದ್ದನ್ನು ಬಿಡಬಾರದು ಎನ್ನುವ ದೃಷ್ಟಿಯಲ್ಲಿ ಅಭಿನಯಿಸಲು ಮುಂದೆ ಬಂದೆ. ನನ್ನ ಕೈಯಲ್ಲಿ ಎಷ್ಟರಮಟ್ಟಿಗೆ ಮಾಡಲು ಸಾಧ್ಯವೋ ಅದನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದೇನೆ. ಫೋಟೊ ನೋಡಿ ನಿರ್ಮಾಪಕರು ಆಹ್ವಾನಿಸಿ ಈ ಪಾತ್ರವನ್ನು ನೀಡಿದರು. ಇದು ನನ್ನ ಮೊದಲ ಧಾರಾವಾಹಿ. ನಟನೆಯೇ ಬರದ ನನಗೆ ಹೇಳಿಕೊಟ್ಟು ಕಲಿಸುತ್ತಿದ್ದಾರೆ. ಅಭ್ಯಾಸದಿಂದ ಒಂದಿಷ್ಟು ಮಾಡುತ್ತಿದ್ದೇನೆ. ಬಿಕಾಂ ನಂತರ ಫ್ಯಾಷನ್ ಡಿಸೈನಿಂಗ್ ಮಾಡುವ ಉದ್ದೇಶ ಇತ್ತು. ಅಮ್ಮ ಮಾನಸಿಕ ಪುನರ್ವಸತಿ ಶಾಲೆ (ಮೆಂಟಲ್ ರಿ ಹ್ಯಾಬ್) ಶಿಕ್ಷಕಿ ಆಗಲು ವಿಶೇಷ ತರಬೇತಿ ಪಡೆಯಬಯಸಿದರು. ಅವರಿಗೆ ಓದಲು ಹೇಳಿ ನಾನು ಫ್ಯಾಷನ್ ಡಿಸೈನಿಂಗ್ ಅಧ್ಯಯನಕ್ಕೆ ಬ್ರೇಕ್ ತೆಗೆದುಕೊಂಡೆ. ನನ್ನ ತಮ್ಮ ಬುದ್ಧಿಮಾಂದ್ಯ ಸಮಸ್ಯೆ ಎದುರಿಸುತ್ತಿದ್ದಾನೆ. ಅವನನ್ನು ಶಾಲೆಗೆ ಕರೆದುಕೊಂಡು ಹೋಗುತ್ತಿದ್ದ ಅಮ್ಮ ಅಲ್ಲಿ ಇರುವ ಮಕ್ಕಳನ್ನು ನೋಡಿ ತಾವೂ ಶಿಕ್ಷಕಿ ಆಗಿ ಮುಂದುವರಿಯುವ ಆಸೆಪಟ್ಟರು. ನಾನು ಮನೆಯ ಎಲ್ಲ ಜವಾಬ್ದಾರಿ ತೆಗೆದುಕೊಂಡೆ. ತಮ್ಮನನ್ನು ಪೋಷಣೆ ಮಾಡುವಲ್ಲಿ ಅಮ್ಮ–ಅಪ್ಪ, ನಾನು ಸಮಾನ ಪ್ರೀತಿ ಮತ್ತು ಜವಾಬ್ದಾರಿಯನ್ನು ತೋರಿಸಿದ್ದೇವೆ. ನಮಗೆ ಅದು ಕಷ್ಟ ಅಥವಾ ಹೊರೆ ಅಂತ ಅನ್ನಿಸುವುದಿಲ್ಲ. ಅವನು ಮಗುವಿನಂತೆ ಅಷ್ಟೇ. ಹೊರಗಿನಿಂದ ನೋಡುವವರಿಗೆ ಅದು ಬೇಜಾರು ಅನ್ನಿಸಬಹುದು. ಅಮ್ಮ ಶಿಕ್ಷಕಿ ಆದ ಮೇಲೆ ಫ್ಯಾಷನ್ ಡಿಸೈನಿಂಗ್ ಸೇರಬೇಕಿತ್ತು. ಅಷ್ಟರಲ್ಲಿ ನಟನೆಯನ್ನು ಆರಂಭಿಸಿದ್ದೇನೆ.

◆ **ಮುಂದಿನ ನಿಮ್ಮ ದಾರಿ ಮತ್ತು ಗುರಿ ಏನು?**

ಒಂದು ರೀತಿಯಲ್ಲಿ ಇದೆಲ್ಲ ‘ಬಯಸದ ಬಂದ ಭಾಗ್ಯ’ ಎನ್ನುತ್ತಾರಲ್ಲ ಹಾಗೆ ಆಗಿದೆ. ಗೊತ್ತಿಲ್ಲದೆ ಆರಂಭಿಸಿದ ಈ ವೃತ್ತಿಯನ್ನು ನಾನು ತುಂಬ ಪ್ರೀತಿ ಮಾಡುತ್ತಿದ್ದೇನೆ. ಇದನ್ನೇ ಆರಾಧಿಸುತ್ತೇನೆ. ಈ ಕ್ಷೇತ್ರದಲ್ಲಿಯೇ ಬೆಳೆಯಬೇಕು ಎನ್ನುವ ಆಸೆ ಇದೆ. ಎರಡು ಸಿನಿಮಾದಲ್ಲಿ ಮಾಡುತ್ತಿದ್ದೇನೆ. ಒಂದು ಡಬ್ಬಿಂಗ್ ಮಾಡುವ ಹಂತಕ್ಕೆ ಬಂದಿದೆ. ಇದರ ಜೊತೆ ತಮಿಳು ಧಾರಾವಾಹಿಯಲ್ಲೂ ಮಾಡಿದ್ದೇನೆ.

◆ **ಸಿನಿಮಾ–ಧಾರಾವಾಹಿ ತಂಡದಲ್ಲಿ ನಿಮ್ಮ ಅನುಭವ ಹೇಗಿದೆ?**

‘ಪಾರು’ ಮೊದಲ ಅನುಭವ. ಈ ತಂಡ ನನಗೆ ಕುಟುಂಬದಂತೆ ಅನ್ನಿಸುತ್ತದೆ. ನಮಗೆಲ್ಲರಿಗೂ ಮನೆಯಂತೆಯೇ ಅನ್ನಿಸುತ್ತದೆ. ಎಲ್ಲರಲ್ಲೂ ಪ್ರೀತಿ ಮತ್ತು ಆತ್ಮೀಯ ಬಾಂಧವ್ಯ ಮೂಡಿದೆ. ಈ ರೀತಿ ಸಿನಿಮಾದಲ್ಲಿ ನಿರೀಕ್ಷೆ ಮಾಡಲು ಸಾಧ್ಯ ಇಲ್ಲ. ಬೇಸರಿಕೆ, ದಣಿವು ಎನ್ನುವುದು ಸೀರಿಯಲ್ ತಂಡದಲ್ಲಿ ಬರಲು ಸಾಧ್ಯವೇ ಇಲ್ಲ. ಕೆಲವೇ ದಿನಗಳ ಕಾಲ ನಡೆಯುವ ಸಿನಿಮಾದಲ್ಲಿ ಆ ರೀತಿಯ ಸಂಬಂಧ ಬೆಸೆಯುವುದು ಕಷ್ಟ. ಮುಂದಿನ ಗುರಿಯ ಬಗ್ಗೆ ಹೇಳುವುದಾದರೆ, ನಟನೆಗೆ ಅವಕಾಶ ಇರುವಂತಹ ಪ್ರಧಾನ ಪಾತ್ರವನ್ನು ಮಾಡಬೇಕು. ಗ್ಲಾಮರ್‌ಗಿಂತ ಕಲೆಗೆ ಪ್ರಾಮುಖ್ಯತೆ ಇರಬೇಕು ಎನ್ನುವುದು ನನ್ನ ಅಪೇಕ್ಷೆ.

◆ **ಚಿತ್ರೀಕರಣದ ಮೊದಲ ದಿನ ಹೇಗಿತ್ತು?**

ಮೇಕಪ್ ಹಚ್ಚೇ ಇರಲಿಲ್ಲ. ಮೊದಲ ದಿನ ನಟನೆಗಾಗಿ ಹಾಕಿದೆ. ಚೆನ್ನಾಗಿ ಕಾಣಿಸುತ್ತಿಲ್ಲ. ನನ್ನಿಂದ ಇದು ಸಾಧ್ಯ ಆಗುವುದಿಲ್ಲ ಬಿಟ್ಟು ಬಿಡಿ ಎಂದು ಗೋಗರೆದಿದ್ದೇನೆ. ಕಣ್ಣೀರು ಹಾಕಿದ್ದೂ ಇದೆ. ಆದರೆ ನಿರ್ಮಾಪಕರು ನಿಮ್ಮಿಂದ ಸಾಧ್ಯ ಪ್ರಯತ್ನ ಮಾಡಿ ಎಂದು ಹುರಿದುಂಬಿಸಿದರು. ಮುಂದುವರಿಸಿದ್ದರಿಂದ ಜನಪ್ರಿಯತೆ ಸಿಕ್ಕಿದೆ. ತುಂಬ ಪ್ರಶಂಸೆಯ ಮಾತುಗಳು ಕೇಳಿದ್ದೇನೆ. ಯಾವ ನಿರೀಕ್ಷೆಯೂ ಇಲ್ಲದೆ ಪ್ಲೇನ್ ಆಗಿ ಬಂದಿದ್ದ ನನಗೆ ಇಲ್ಲಿನ ಮನ್ನಣೆ ತುಂಬ ನೆಮ್ಮದಿಯನ್ನು ನೀಡಿದೆ. ಎಷ್ಟೊಂದು ಧಾರಾವಾಹಿಗಳು ಬರ್ತಾ ಇವೆ. ಅದರಲ್ಲಿ ಎಷ್ಟೊಂದು ಮಂದಿ ಕಲಾವಿದರು ಇದ್ದಾರೆ. ನನಗಿಂತ ಒಳ್ಳೆಯ ನಟರೂ ಇದ್ದಾರೆ. ಹೀಗಿದ್ದೂ ನನಗೆ ಜನರ ಅಪಾರ ಪ್ರೀತಿ ಸಿಕ್ಕಿದೆ ಎನ್ನುವ ತೃಪ್ತಿ ನನ್ನದು.

■ **ರಾಘವೇಂದ್ರ ಕೆ.**

